# ಮೈಸೂರೇ ಚಂದಕ್ಕಿಂತ ಚಂದ!



ಮಾಲ್ದೀವ್ಸ್‌ನಿಂದ ಬಂದ ಲುಬ್ನ

ಮೈಸೂರು ಎಂದ ಕೂಡಲೇ 'ಪ್ರವಾಸಿ ತಾಣ' ಎಂದು ಮನದಲ್ಲಿ ತಟ್ಟನೆ ಸುಳಿಯುತ್ತದೆ. ವಿದ್ಯಾರ್ಥಿಗಳ ಪಾಲಿಗೆ ಇದು 'ಶಿಕ್ಷಣ ಕಾಶಿ'. ಅಂತೆಯೇ ಹೊರರಾಜ್ಯ, ವಿದೇಶಗಳ ಸಾವಿರಾರು ವಿದ್ಯಾರ್ಥಿಗಳು ಭವಿಷ್ಯದ ಭದ್ರ ಬುನಾದಿಗೆ ಅಡಿಗಲ್ಲು ಹಾಕಿಕೊಳ್ಳಲು ಇಲ್ಲಿಗೆ ದಾಪುಗಾಲಿಡುತ್ತಾರೆ. 'ಶಿಕ್ಷಣಕ್ಕೆ ಮೈಸೂರು ನಮ್ಮ ದೇಶದಲ್ಲಿ ತುಂಬಾ ಹೆಸರುವಾಸಿ' ಎನ್ನುವ ಮಾಲ್ದೀವ್ಸ್‌ನ ಲುಬ್ನ ಅವರ ಮಾತು ಇದನ್ನು ಸಾಕ್ಷೀಕರಿಸುತ್ತದೆ.

ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ 10ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಲುಬ್ನ ಅವರಿಗೆ ಐದು ವರ್ಷಗಳಿಂದ ಮೈಸೂರಿನ ನಂಟು ಬೆಸೆದುಕೊಂಡಿದೆ.

12ನೇ ತರಗತಿವರೆಗೆ ಮಾಲ್ದೀವ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದ ಅವರಿಗೆ 'ಕಾನೂನು' ವ್ಯಾಸಂಗ ಆಕಸ್ಮಿಕವಾಗಿ ಒದಗಿಬಂದ ಅವಕಾಶ. 'ಔಷಧ ವಿಜ್ಞಾನ ನನ್ನ ಮೊದಲ ಆಯ್ಕೆಯಾಗಿತ್ತು. ಕುಟುಂಬದ ಸದಸ್ಯರಲ್ಲಿ ಬಹುತೇಕರು ವೈದ್ಯಕೀಯ ಕ್ಷೇತ್ರದಲ್ಲಿದ್ದಾರೆ. ಆದ್ದರಿಂದ ಔಷಧ ವಿಜ್ಞಾನದ ಕುರಿತು ಆಸಕ್ತಿ ಬೆಳೆದಿತ್ತು. ಆದರೆ, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕುವಾಗ ಮೂರು ಆಯ್ಕೆಗಳಿದ್ದವು. ಅದರಲ್ಲಿ ಕಾನೂನು ವಿಷಯಕ್ಕೆ ಸ್ಕಾಲರ್‌ಶಿಪ್ ಸಿಕ್ಕಿತು. ವಕೀಲಿ ವೃತ್ತಿಯಲ್ಲಿಯೂ ಉತ್ತಮ ಭವಿಷ್ಯವಿದೆ. ವಿಭಿನ್ನ ಕ್ಷೇತ್ರಗಳಲ್ಲಿ ತೊಡಗಿಕೊಳ್ಳಲು ಅವಕಾಶವಿದೆ' ಎನ್ನುತ್ತಾರೆ ಲುಬ್ನ.

ಹಾಗೆಯೇ, ಅವರು ಮೈಸೂರಿಗೆ ಬಂದದ್ದೂ ಆಕಸ್ಮಿಕ. 'ಮೊದಲು ದೆಹಲಿಯ ಒಂದು ಕಾಲೇಜಿನಲ್ಲಿ ಪ್ರವೇಶಾವಕಾಶ ಸಿಕ್ಕಿತ್ತು. ಅಲ್ಲಿಗೆ ಎಲ್ಲ ದಾಖಲಾತಿಗಳನ್ನು ಸಲ್ಲಿಸಿಯಾಗಿತ್ತು. ಕಡೆ ಕ್ಷಣದಲ್ಲಿ ಮೈಸೂರಿಗೆ ಬರುವ ಅನಿವಾರ್ಯತೆ ಎದುರಾಯಿತು. ಭಾರತದ ರಾಜಧಾನಿಯಲ್ಲಿ ಓದುವ ಅವಕಾಶ ಕೈತಪ್ಪಿದ್ದಕ್ಕೆ ನಿಜಕ್ಕೂ ಬೇಸರವಾಗಿತ್ತು. ಆದರೆ, ಇಲ್ಲಿ ನೆಲೆಸಿದ ಸ್ವಲ್ಪ ದಿನಗಳಲ್ಲೇ ಮೈಸೂರಿಗೆ ಬಂದು ಒಳ್ಳೆಯ ಕೆಲಸ ಮಾಡಿದೆ ಎಂಬುದು ನನಗೆ ಮನದಟ್ಟಾಯಿತು. ದೆಹಲಿಯ ವಾಯುಮಾಲಿನ್ಯ, ಜನಸಂದಣಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿತು. ಆ ರೀತಿಯ ಯಾವ ಸಮಸ್ಯೆಯೂ ಇಲ್ಲಿಲ್ಲ. ಪ್ರಶಾಂತ ವಾತಾರಣವಿರುವ ಮೈಸೂರಲ್ಲಿ ಓದಲು ಅವಕಾಶ ಸಿಕ್ಕಿದ್ದು ನಿಜಕ್ಕೂ ನನ್ನ ಅದೃಷ್ಟ' ಎಂದು ಕೊಂಡಾಡುತ್ತಾರೆ.

'ನಮ್ಮಲ್ಲಿನ ಆಹಾರ ಪದ್ಧತಿಗೂ ಇಲ್ಲಿಗೂ ಕೊಂಚ ವ್ಯತ್ಯಾಸವಿದ್ದರೂ, ಹೊಂದಿಕೊಳ್ಳಲು ಕಷ್ಟವೆನಿಸಲಿಲ್ಲ. ಇಲ್ಲಿಗೆ ಬಂದು ಇಷ್ಟು ವರ್ಷಗಳಲ್ಲಿ ಪರಕೀಯ ಭಾವನೆ ಯಾವತ್ತೂ ಕಾಡಿಲ್ಲ. ಭಾರತೀಯರಲ್ಲಿ ಮುಖ್ಯವಾಗಿ ಬೇಧ ಅನ್ನೋದು ಇಲ್ಲ. ಎಲ್ಲರನ್ನೂ ಸ್ನೇಹಪರತೆಯಿಂದ ಕಾಣುತ್ತಾರೆ. ತಮ್ಮೊಳಗೆ ಒಬ್ಬರನ್ನಾಗಿ ನೋಡುತ್ತಾರೆ. ಕಾಲೇಜಿನ ಉಪನ್ಯಾಸಕರು, ಸಹಪಾಠಿಗಳು ಅನ್ಯೋನ್ಯವಾಗಿದ್ದಾರೆ. ಇನ್ನು ಒಂದು ತಿಂಗಳಲ್ಲಿ ಇಲ್ಲಿನ ವಿದ್ಯಾಭ್ಯಾಸ ಮುಗಿಯುತ್ತದೆ. ವಾಪಸ್ ಮಾಲ್ದೀವ್ಸ್‌ಗೆ ಹೋಗಬೇಕು. ಆದರೆ, ಹಿಂತಿರುಗಿ ನೋಡಿದರೆ ಐದು ವರ್ಷ ಕಳೆದದ್ದೇ ಗೊತ್ತಾಗಿಲ್ಲ' ಎನ್ನುವ ಲುಬ್ನ ಅವರಿಗೆ ಇಲ್ಲಿನ ಜನರನ್ನು ಕಂಡರೆ ಅಚ್ಚುಮೆಚ್ಚಂತೆ.

**ಊಟಿ ಬಲು ಇಷ್ಟ**

ಬೆಂಗಳೂರು, ಊಟಿ, ಮಡಿಕೇರಿ, ಒಡಿಸ್ಸಾದ ಭುವನೇಶ್ವರ ಹೀಗೆ ದೇಶದ ಪ್ರಮುಖ ಸ್ಥಳಗಳನ್ನು ವೀಕ್ಷಿಸಿದ್ದಾರೆ. ಇವುಗಳಲ್ಲಿ ಊಟಿ ಬಲು ಇಷ್ಟವಾಗಿದೆ. 'ಊಟಿ ಪ್ರವಾಸಿಗರ ಸ್ವರ್ಗದಂತಿದೆ. ನಮ್ಮ ದೇಶದಲ್ಲಿ ಎಲ್ಲಿ ನೋಡಿದರೂ ಸಮುದ್ರ. ಇಷ್ಟೊಂದು ಹಸಿರನ್ನು ಅಲ್ಲಿ ಕಾಣಲು ಸಾಧ್ಯವಿಲ್ಲ. ಅಲ್ಲಿಯ ಹಸಿರು ನನ್ನನ್ನು ಸೆಳೆಯಿತು. ಹೀಗಾಗಿ, ಊಟಿಗೆ ಮೂರು ಬಾರಿ ಭೇಟಿ ಕೊಟ್ಟು ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಂಡಿದ್ದೇನೆ' ಎನ್ನುವ ಅವರು, ಕುಟುಂಬದ ಸದಸ್ಯರೊಂದಿಗೆ ಉತ್ತರ ಭಾರತದ ಪ್ರವಾಸ ಮಾಡುವ ಬಯಕೆ ಹೊಂದಿದ್ದಾರೆ.

ಮದುವೆ ಸಂದರ್ಭದಲ್ಲಿ ಧರಿಸುವ ಸಾಂಪ್ರದಾಯಿಕ ಉಡುಪುಗಳನ್ನು ಮೆಚ್ಚಿಕೊಳ್ಳುವ ಲುಬ್ನ ಅವರಿಗೆ ತಮ್ಮ ದೇಶದ ಉಡುಪೇ ಇಷ್ಟ. 'ಒಡವೆ, ಸೀರೆ ಈ ರೀತಿಯ ಆಡಂಬರ ನಮ್ಮಲ್ಲಿಲ್ಲ. ಸಮಾರಂಭಗಳಿಗೆ ಮಾಮೂಲು ಉಡುಪುಗಳೇ ಇರುತ್ತವೆ. ಸ್ವಲ್ಪ ಅದ್ದೂರಿಯಾಗಿರುತ್ತವೆ ಅಷ್ಟೆ. ಸೀರೆ ಉಟ್ಟವರನ್ನು ಕುತೂಹಲದಿಂದ ನೋಡುತ್ತೇನೆ. ಒಮ್ಮೆ ಉಟ್ಟು ಅನುಭವ ಪಡೆದುಕೊಂಡಿದ್ದೇನೆ. ಸೀರೆ ಉಟ್ಟರೆ ಬಟ್ಟೆಯ ಮೂಟೆಯನ್ನೇ ಮೈಮೇಲೆ ಹಾಕಿಕೊಂಡ ಅನುಭವವಾಗುತ್ತದೆ' ಎಂದು ನಗುತ್ತಾರೆ ಲುಬ್ನ.

ಚಲನಚಿತ್ರ ವೀಕ್ಷಣೆ, ಪುಸ್ತಕ ಓದುವುದು ಅವರ ನೆಚ್ಚಿನ ಹವ್ಯಾಸ. ಬಿಡುವಿನ ಸಮಯದಲ್ಲಿ ಮೈಸೂರನ್ನು ಸುತ್ತುತ್ತಾರೆ. 'ಇಲ್ಲಿ ಎಲ್ಲ ರಸ್ತೆಗಳನ್ನೂ ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಸಂಜೆ ಸಮಯದಲ್ಲಿ ಮೈಸೂರು ಸುತ್ತುವುದೇ ಚಂದ' ಎನ್ನುತ್ತಾರೆ.

'ಮಾಲ್ದೀವ್ಸ್‌ನಲ್ಲಿ ಬಹುತೇಕರಿಗೆ ಹಿಂದಿ ಭಾಷೆ ಬರುತ್ತದೆ. ಹಿಂದಿ ಸ್ವಲ್ಪಮಟ್ಟಿಗೆ ಮಾತನಾಡುತ್ತೇನೆ. ಹೀಗಾಗಿ, ಕನ್ನಡ ಕಲಿಯಲೇಬೇಕಾದ ಅನಿವಾರ್ಯತೆ ಬರಲಿಲ್ಲ. ಆದರೆ, ಕನ್ನಡ ಕೆಲ ಪದಗಳು ಅರ್ಥವಾಗುತ್ತವೆ' ಎನ್ನುವ ಅವರು, ಇಲ್ಲಿನ ಚಿಕನ್ ಕಬಾಬ್ ಮತ್ತು ಬಿರಿಯಾನಿಯನ್ನು ಬಲು ಇಷ್ಟಪಟ್ಟು ತಿನ್ನುತ್ತಾರೆ.

'ನಮ್ಮ ದೇಶಕ್ಕಿಂತಲೂ ಮೈಸೂರು ತುಂಬಾ ಸುರಕ್ಷಿತವಾಗಿದೆ. ಇದುವರೆಗೂ ಅಸುರಕ್ಷತೆಯ ಭಾವ ಕಾಡಿಲ್ಲ. ಆದರೆ, ಬೆಂಗಳೂರಿನ ಮಾಲಿನ್ಯ ಮತ್ತು ಸಂಚಾರ ದಟ್ಟಣೆ ನನ್ನಲ್ಲಿ ಭೀತಿ ಸೃಷ್ಟಿಸಿತ್ತು' ಎನ್ನುವ ಲುಬ್ನ ಸ್ವಂತದ ಕಂಪೆನಿ ಸ್ಥಾಪಿಸಿ ನಾಲ್ಕಾರು ಜನರಿಗೆ ಉದ್ಯೋಗ ಕೊಡಬೇಕು ಎಂಬ ಕನಸು ಕಟ್ಟಿಕೊಂಡಿದ್ದಾರೆ.

■ ಸುಮಾ ಬಿ.